**ಸಾಕ್ಷಿಯನ್ನು ದಿನಾಂಕ 19.12.2024 ರಂದು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎನ್ ಎಂ ಎಸ್ ವಕೀಲರಿಂದಃ**

20. ಈ ಪ್ರಕರಣವನ್ನು ದಾಖಲಿಸುವ ಮೊದಲು ಎಷ್ಟು ವರ್ಷಗಳ ಹಿಂದೆ ನೀವು ಮತ್ತು ನಿಮ್ಮ ಮಕ್ಕಳು ಎದುರುದಾರರ ಮನೆಗೆ ಹೋಗಿದ್ದೀರಿ ಎಂದರೆ ಸಾಕ್ಷಿ ನಾನು ಎದುರುದಾರರ ಮನೆಗೆ ಹೋಗಿ 18 ವರ್ಷ ಕಳೆದಿದೆ, ನನ್ನ ಮಕ್ಕಳು ಎದುರುದಾರರ ಮನೆಗೆ ಹೋಗಿ 10 ರಿಂದ 12 ವರ್ಷ ಕಳೆದಿರಬಹುದು ಎಂದು ನುಡಿಯುತ್ತಾರೆ. ಆ ವಿಚಾರವನ್ನು ನಾನು ಸಲ್ಲಿಸಿರುವ ಅರ್ಜಿಯಲ್ಲಿ ಬರೆಸಿಲ್ಲ. ದಿಃ 14.02.2022 ರವರೆಗೂ ನಾನು ಮತ್ತು ನನ್ನ ಮಕ್ಕಳು ಎದುರುದಾರರ ಮನೆಗೆ ಹೋಗಿ ಬರುತ್ತಿದ್ದೇವು ಎಂದರೆ ಸುಳ್ಳು. ಎದುರುದಾರರ ಮನೆಗೆ ನಾನು ಕೊನೆಯ ಬಾರಿಗೆ 2006 ರಿಂದ 2007 ರಲ್ಲಿ ಹೋಗಿದ್ದೆ. ನನ್ನ ಮಕ್ಕಳು ಎದುರುದಾರರ ಮನೆಗೆ 10 ರಿಂದ 12 ವರ್ಷಗಳ ಹಿಂದಿನಿಂದ ಹೋಗಿಲ್ಲ.

21. ನಾನು ಮತ್ತು ಎದುರುದಾರರು ಮತ್ತು ಮಕ್ಕಳು ಒಟ್ಟಿಗೆ ವಾಸವಿದ್ದಾಗ ಎದುರುದಾರರ ತಂದೆ ತಾಯಿಯರು ನಮ್ಮ ಮನೆಗೆ ಬರುತ್ತಿದ್ದರು ಎಂದರೆ ಸಾಕ್ಷಿ ನಾನು ಮನೆಯಲ್ಲಿ ಇಲ್ಲದ ಸಮಯದಲ್ಲಿ ಅವರು ಬರುತ್ತಿದ್ದರು ಎಂದು ನುಡಿಯುತ್ತಾರೆ. ದಿಃ 14.02.2022 ರವರೆಗೂ ನಾನು ಎದುರುದಾರರ ತಂದೆ ತಾಯಿಯರ ಮನೆಗೆ ಹೋಗುತ್ತಿದ್ದೆ ಮತ್ತು ಎದುರುದಾರರ ತಂದೆ ತಾಯಿಯರು ಸಹ ನಮ್ಮ ಮನೆಗೆ ಬರುತ್ತಿದ್ದರು ಎಂದರೆ ಸುಳ್ಳು. ನೀವು ಈಗ ಕಚೇರಿಗೆ ಎಷ್ಟು ಗಂಟೆಗೆ ಹೋಗಿ ಎಷ್ಟು

ಗಂಟೆಗೆ ಬರುತ್ತೀರಿ ಎಂದರೆ ಸಾಕ್ಷಿ ನಾನು ಕಾರ್ಯನಿರ್ವಾಹಕ ಅಧಿಕಾರಿಯಾಗಿರುವುದರಿಂದ 24x7 ನನಗೆ ಕೆಲಸ ಇರುತ್ತದೆ ನಿರ್ದಿಷ್ಟ ಸಮಯ ಹೇಳಲು ಅಗುವುದಿಲ್ಲ ಎಂದು ನುಡಿಯುತ್ತಾರೆ.

22. ನಾನು ಕೆಲಸದಲ್ಲಿ ತೊಡಗಿರುವುದರಿಂದ ನನ್ನ ತಾಯಿಗೆ 83 ವರ್ಷ ವಯಸ್ಸಾಗಿರುವುದರಿಂದ ನನ್ನ ತಾಯಿ ಮತ್ತು ಮಕ್ಕಳನ್ನು ನೋಡಿಕೊಳ್ಳಲು ಎದುರುದಾರರ ಅವಶ್ಯಕತೆ ಇದೆಯೆಂದರೆ ಸುಳ್ಳು. ಎದುರುದಾರಳು ಚಿಂತಾಮಣಿಯಲ್ಲಿಯೇ ಕೆಲಸ ಮಾಡುವುದರಿಂದ ಮತ್ತು ನಾನು ಕೆಲಸಕ್ಕೆ ಹೋಗುವುದರಿಂದ ಎದುರುದಾರಳು ನನ್ನ ತಾಯಿ ಮತ್ತು ಮಕ್ಕಳ ಯೋಗಕ್ಷೇಮವನ್ನು ಈಗಲೂ ನೋಡುತ್ತಿದ್ದಾರೆಂದರೆ ಸುಳ್ಳು. ನನ್ನ ತಾಯಿ ಎದುರುದಾರಳನ್ನು ಮನೆಗೆ ಕರೆದುಕೊಂಡು ಬರುವಂತೆ ಹೇಳುತ್ತಿದ್ದರೂ ಸಹ ಎದುರುದಾರಳು ನನ್ನ ವಿರುದ್ದ ದೂರನ್ನು ದಾಖಲಿಸಿದ್ದಾರೆಂಬ ಕಾರಣದಿಂದ ಆಕೆಯನ್ನು ಮನೆಗೆ ಕರೆತರುತ್ತಿಲ್ಲ ಎಂದರೆ ಸುಳ್ಳು. ನನಗೆ ಈಗ ಸುಮಾರು ಒಂದು ಲಕ್ಷದವರೆಗೆ ಸಂಬಳ ಬರುತ್ತಿದೆ. ಈಗ ನಾನು ವಾಸವಿರುವ ಮೂರು ಅಂತಸ್ತಿನ ಮನೆ ನನ್ನ ಹೆಸರಿನಲ್ಲಿದೆ ಎಂದರೆ ಸರಿ. ನನ್ನ ಸ್ವಂತ ಊರಾದ ಕುರುಬೂರಿನಲ್ಲಿ ಸ್ವಂತ ಮನೆ ಇರುತ್ತದೆ.

23. ಕುರುಬೂರಿನಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಜಮೀನು ಇರುತ್ತದೆ. ನಾನು ಬ್ಯಾಂಕಿನಲ್ಲಿ ಠೇವಣಿಯನ್ನು ಹೊಂದಿಲ್ಲ. ನಾನು ಚಿಂತಾಮಣಿಯಲ್ಲಿ ಮತ್ತು ಕುರುಬೂರಿನಲ್ಲಿ ಮನೆ ಮತ್ತು ಆಸ್ತಿಗಳನ್ನು ಹೊಂದಿದ್ದು ಎದುರುದಾರಳನ್ನು ಆಕೆಯ

ತವರು ಮನೆಗೆ ಕಳುಹಿಸಿರುವುದರಿಂದ ಆಕೆಗೆ ವಾಸಿಸಲು ಮನೆ ಇಲ್ಲ ಎಂದರೆ ಸಾಕ್ಷಿ ಆಕೆಯೇ ಮನೆಯಿಂದ ಹೊರಟು ಹೋಗಿರುತ್ತಾಳೆಂದು ನುಡಿಯುತ್ತಾರೆ. ಎದುರುದಾರಳು ನಮ್ಮ ಮನೆಗೆ ಬಂದು ವಾಸಿಸಲು ಹಿಂದೆ ಮತ್ತು ಈಗಲೂ ಸಿದ್ಧರಿದ್ದಾರೆಂದರೆ ಸಾಕ್ಷಿ ನನಗೆ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ.

24. ನಾನು ಹಾಜರು ಪಡಿಸಿರುವ ವೈದ್ಯಕೀಯ ದಾಖಲೆಗಳು ನನಗೆ ರಕ್ತ ಹೆಪ್ಪು ಗಟ್ಟಿದ ಕಾರಣ ಪಡೆದ ಚಿಕಿತ್ಸೆಯ ದಾಖಲೆಗಳು ಆಗಿರುತ್ತವೆ. ಆ ದಾಖಲೆಗಳು ನನಗೆ ರಕ್ತ ಹೆಪ್ಪು ಗಟ್ಟಿದ ಕಾರಣ ಪಡೆದ ಚಿಕಿತ್ಸೆಯ ದಾಖಲೆಗಳ ಎಂದರೆ ಹೌದು ಎಂದು ನುಡಿಯುತ್ತಾರೆ. ಆರ್ ಎಲ್ ಜಾಲಪ್ಪ ಆಸ್ಪತ್ರೆಯಲ್ಲಿ ನಾನು 6 ತಿಂಗಳು ದಾಖಲಾಗಿದ್ದೆ. ರಾಮಯ್ಯ ಆಸ್ಪತ್ರೆಯಲ್ಲಿ 3 ರಿಂದ 4 ದಿನಗಳ ಕಾಲ ದಾಖಲಾಗಿದ್ದೆ. ನಾನು ಹಾಜರು ಪಡಿಸಿರುವ ವೈದ್ಯಕೀಯ ದಾಖಲೆಗಳಿಗೂ ಮತ್ತು ಎದುರುದಾರರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕೆ.ಹೆಚ್.ಮುನಿಯಪ್ಪ ನನ್ನ ದೂರದ ಸಂಬಂಧಿ. ನನ್ನ ತಾಯಿ ಮತ್ತು ಕೆ.ಹೆಚ್.ಮುನಿಯಪ್ಪನವರ ಹೆಂಡತಿ ಸಹೋದರಿಯರು ಎಂದರೆ ಇರಬಹುದು. ಕೆ.ಹೆಚ್.ಮುನಿಯಪ್ಪರವರು 30 ವರ್ಷ ಸಂಸದರು ಆಗಿದ್ದರು ಎಂದರೆ ಸರಿ. ಅವರು ಈಗ ಈಗಿನ ಸರ್ಕಾರದಲ್ಲಿ ಆಹಾರ ಸಚಿವರು ಆಗಿದ್ದಾರೆಂದರೆ ಸರಿ. ನಾನು ರಾಜಕೀಯವಾಗಿ ಬಲಶಾಲಿಯಾಗಿದ್ದೇನೆಂದರೆ ಸುಳ್ಳು. ನಾನು ರಾಜಕೀಯ ಪ್ರಭಾವ ಬಳಸಿ ವೈದ್ಯಕೀಯ ದಾಖಲೆಗಳನ್ನು ಈ ಕೇಸಿಗಾಗಿ ಸೃಷ್ಟಿಸಿದ್ದೇನೆಂದರೆ ಸುಳ್ಳು.

25. ಎದುರುದಾರಳು ನನ್ನ ಒಳ್ಳೆಯ ಹೆಂಡತಿಯಾಗಿ ದಾಂಪತ್ಯ ಜೀವನವನ್ನು ನಡೆಸಿದ್ದರೂ ಸಹ ಸುಳ್ಳು ಕಾರಣಗಳನ್ನು ನೀಡಿ ಈ ಆರ್ಜಿಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಎದುರುದಾರಳು ತನ್ನ ಮುಂದಿನ ಜೀವನವನ್ನು ನನ್ನ ಮತ್ತು ಮಕ್ಕಳ ಜೊತೆ ನಡೆಸಬೇಕೆಂಬ ಇಚ್ಚೆ ಹೊಂದಿದ್ದಾಳೆಂದರೆ ಸಾಕ್ಷಿ ನನಗೆ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಎದುರುದಾರಳು ವಿಚ್ಚೇದನವನ್ನು ನೀಡುವಂತ ಯಾವುದೇ ತಪ್ಪನ್ನು ಮಾಡಿಲ್ಲ ಎಂದರೆ ಸುಳ್ಳು. ನನ್ನ ನಡತೆಯ ಬಗ್ಗೆ ಎದುರುದಾರಳು ನಮ್ಮ ಇಲಾಖೆಗೆ ದೂರನ್ನು ನೀಡಿದ ಕಾರಣ ಮತ್ತು ಪ್ರ.ವ.ವರದಿ ವರದಕ್ಷಿಣೆ ಬೇಡಿಕೆಗೆ ಸಂಬಂದಿಸಿದಂತೆ ದಾಖಲಾದ ಕಾರಣ ನಾನು ಈ ಅರ್ಜಿಯನ್ನು ಸಲ್ಲಿಸಿದ್ದೇನೆಂದರ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೆ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಚಿಂತಾಮಣಿ.